iihs
INDIAN INSTITUTE FOR HUMAN SETTLEMENTS

# ಲಾಕ್‌ಡೌನ್ ಹಾಗೂ ಆರೋಗ್ಯ ತುರ್ತು ಸಂದರ್ಭದಲ್ಲಿ ಪರಿಗಣಿಸಬೇಕಾದ ಆದ್ಯತೆಗಳ ಕುರಿತು IIHSನ ಸಲಹೆ

**ಮಾಡಬೇಕಾದ ಇಪ್ಪತ್ತು ಅವಶ್ಯಕ ಕಾರ್ಯಗಳು**

1. **ಜಿಲ್ಲೆ ಮತ್ತು ರಾಜ್ಯದ ಪರಿಸ್ಥಿತಿ/'ಯುದ್ಧ' ಕೊಠಡಿಗಳನ್ನು ಬಲಪಡಿಸುವುದು:** ಸಾರ್ವಜನಿಕರಿಗೆ ಅತ್ಯವಶ್ಯವಿರುವ ಸೇವೆಗಳನ್ನು ಒದಗಿಸುವ ಹೆಚ್ಚು ಇಲಾಖಾ ಸಿಬ್ಬಂದಿಗಳನ್ನು ನೇಮಿಸಿ ವ್ಯವಸ್ಥೆಯನ್ನು ಚಾಲ್ತಿಯಲ್ಲಿಡುವುದು. ಅತ್ಯವಶ್ಯವಿರುವ ಸೇವೆಗಳನ್ನು ಒದಗಿಸುವಾಗ ಉಂಟಾಗುವ ತೊಡಕುಗಳನ್ನು ನಿವಾರಿಸಲು ಜಿಪಿಎಸ್ ಮತ್ತು ವಿಶ್ಲೇಷಣಾತ್ಮಕ (analytical) ವ್ಯವಸ್ಥೆಯನ್ನು ಅಳವಡಿಸಬೇಕು. ಸಾಮಾಜಿಕ ಹಾಗೂ ಪ್ರಸರಣಾ ಮಾಧ್ಯಮಕ್ಕಾಗಿ ತುರ್ತು ಸಂವಹನ ಸಾಮರ್ಥ್ಯವನ್ನು ಸ್ಥಾಪಿಸಬೇಕು. ನಾಗರಿಕ, ಪಾಲುದಾರ ಹಾಗೂ ಮುಂಚೂಣಿಯಲ್ಲಿ ಕೆಲಸ ಮಾಡುವ ಸಿಬ್ಬಂದಿಗಳ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಲು ಹಾಗೂ ತೊಡಕುಗಳನ್ನು ಗುರುತಿಸಲು ಬೆಂಬಲ ಹಾಟ್‌ಲೈನ್/ತುರ್ತು ಸಹಾಯವಾಣಿ ಹಾಗೂ ಕಾಲ್ ಸೆಂಟರ್ ಗಳಿಂದ ಮಾಹಿತಿಯ ಹರಿವನ್ನು ಸಕ್ರಿಯಗೊಳಿಸುವುದು
2. **ಆರೋಗ್ಯ ವ್ಯವಸ್ಥೆಗಳು, ತುರ್ತು ಸೇವೆಗಳು ಹಾಗೂ ಫ಼ಾರ್ಮಾ ಮತ್ತು ವೈದ್ಯಕೀಯ ಸರಬರಾಜು/ಪೂರೈಕೆಯ ಸರಪಳಿಯನ್ನು ಸದೃಢಪಡಿಸುವುದು:** ಸೂಕ್ತ ಸಲಹೆಗಳು ಹಾಗೂ ಉತ್ತಮ ಆಚರಣೆಗಳ ಪ್ರಕಾರ ವ್ಯವಸ್ಥೆಯನ್ನು ಸದೃಢಪಡಿಸುವುದು. ಇದರ ಕುರಿತಾಗಿ ಇಲ್ಲಿ ವಿವರಣೆ ನೀಡದ ಪ್ರತ್ಯೇಕ ಮಾರ್ಗದರ್ಶನ ಹಾಗೂ ವಿಶಿಷ್ಟ ಕ್ರಮಗಳ ಅಗತ್ಯವಿದೆ.
3. **ರಾಜ್ಯವ್ಯಾಪಿ ಮಾಹಿತಿ ಮತ್ತು ಪ್ರಸರಣ ತಂತ್ರಜ್ಞಾನದ ಮೂಲಸೌಕರ್ಯಗಳನ್ನು ಸುಭದ್ರಗೊಳಿಸಿ, ಚಾಲ್ತಿಯಲ್ಲಿರುವ ಸೇವೆಗಳನ್ನು ಖಚಿತಪಡಿಸಿಕೊಳ್ಳುವುದು:** ಎಲ್ಲ ನಾಗರಿಕರಿಗೂ ಫ಼ೋನ್, ಮೊಬೈಲ್ ಫ಼ೋನ್, ಅಂತರ್ಜಾಲ, ಟಿವಿ, ಮುದ್ರಣ ಹಾಗೂ ಎಲೆಕ್ಟ್ರಾನಿಕ್ ಮಾಧ್ಯಮಗಳು, ಹಾಗೂ ಸಂಪರ್ಕ ಸಾಧನಗಳು/ವಿಧಾನಗಳು/ಮಾರ್ಗಗಳು ದೊರೆಯುವಂತೆ ಮಾಡುವುದು . ರಾಜ್ಯ ಹಾಗೂ ಸ್ಥಳೀಯ ಆಡಳಿತದೊಂದಿಗೆ ಮುಕ್ತ ಹಾಗೂ ಪಾರದರ್ಶಕ ಒಡನಾಟಕ್ಕಾಗಿ ಹಾಗೂ ಸಂಕಷ್ಟದಲ್ಲಿರುವ ನಾಗರಿಕರು, ಅತ್ಯಂತ ದುರ್ಬಲ ಹಾಗೂ ವಿಶೇಷ ಗುಂಪುಗಳೊಂದಿಗೆ (ಉದಾ., ವಲಸಿಗರು) ವ್ಯವಹರಿಸಲು/ಪ್ರತಿಕ್ರಿಯಿಸಲು ಸಹಾಯವಾಣಿಯನ್ನು ಸ್ಥಾಪಿಸುವುದು.
4. **ಬ್ಯಾಂಕಿಂಗ್, ಅಂಚೆ ಕಛೇರಿ, ಎಟಿಎಮ್ ಹಾಗೂ ಖಜಾನೆ ಸೇವೆಗಳನ್ನು ಬಲಪಡಿಸುವುದು: ಇದು** ನೇರ ನಗದು ವರ್ಗಾವಣೆಗಳು, ಪಿಂಚಣಿ, ಇತ್ಯಾದಿಗಳನ್ನು ತಲುಪಿಸಲು ಹಾಗೂ ಅಗತ್ಯ ಸೇವೆಗಳು ಮತ್ತು ಸರ್ಕಾರದ ಕಾರ್ಯಚಟುವಟಿಕೆಯನ್ನು ಚಾಲ್ತಿಯಲ್ಲಿರಲು ಅವಶ್ಯಕವಾಗಿದೆ. ನಗದು ಪೂರೈಕೆ ಕಡಿಮೆ ಆಗಿದೆ ಎಂಬುದು ವರದಿಯಾದರೆ, ಅನೌಪಚಾರಿಕ ಆರ್ಥಿಕ ವ್ಯವಸ್ಥೆಯ ಜೀವನಾಡಿಯಾದ ಸ್ಥಳೀಯ ನಗದು ಸರಬರಾಜುಗಳನ್ನು ಮರುಪೂರಣ ಮಾಡುವ ವಿಚಾರವನ್ನು ಪರಿಗಣಿಸುವುದು.
5. **ನಾಗರಿಕ ಸರಬರಾಜು ವ್ಯವಸ್ಥೆ (ಪಿಡಿಎಸ್) ಹಾಗೂ ಸಾರ್ವಜನಿಕ ಸೇವೆಗಳನ್ನು ಸದೃಢಗೊಳಿಸಿ ಹಾಗೂ ವೃದ್ಧಿಸುವುದು:** ದಾಸ್ತಾನುಗಳ ಚಲನವಲನವೂ ಸೇರಿದಂತೆ, ವಸ್ತುರೂಪದ/ದ್ರವರೂಪದ ನೆರವಿನ (ಉದಾ., ಆಹಾರ, ನಾಗರಿಕ ಸರಬರಾಜು, ಸೀಮೆಎಣ್ಣೆ, ಹಾಗೂ ಗ್ಯಾಸ್ ಸಿಲಿಂಡರ್) ಸರಬರಾಜಿಗಾಗಿ ಅಗತ್ಯವಾದುದು ಹಾಗೂ ಈ ವ್ಯವಸ್ಥೆಗಳನ್ನು ಚಾಲ್ತಿಯಲ್ಲಿಡುವ ಅನೌಪಚಾರಿಕ ವಲಯದ ಕಾರ್ಮಿಕರ ರಕ್ಷಣೆ ಮತ್ತು ನೆರವಿಗಾಗುವುದು. ಅಂಗನವಾಡಿ ಹಾಗೂ ಮಧ್ಯಾಹ್ನದ ಬಿಸಿಯೂಟದ ಕಾರ್ಯಕ್ರಮಗಳು, ಆಸ್ಪತ್ರೆಗಳು ಹಾಗೂ ಅತ್ಯವಶ್ಯಕ/ತುರ್ತು ಆರೈಕೆಯ ಸೌಲಭ್ಯಗಳಿಗೆ ಮತ್ತು, ಹಿರಿಯರು, ದುರ್ಬಲರು ಹಾಗೂ ದುರ್ಗಮ ಪ್ರದೇಶಗಳಲ್ಲಿರುವ ಜನರಿಗಾಗಿ ಅವಶ್ಯಕ ಸರಬರಾಜುಗಳನ್ನು ನಿರ್ವಹಣೆ ಮಾಡುವತ್ತ ವಿಶೇಷ ಕಾಳಜಿ ವಹಿಸುವುದು.
6. **ಪ್ರಯಾಣಿಕರ ತುರ್ತು ಸ್ಥಳಾಂತರ/ವರ್ಗಾವಣೆ:** ಲಕ್ಷಾಂತರ ವಲಸೆ ಕಾರ್ಮಿಕರು ಹಾಗೂ ತುರ್ತು ವೈದ್ಯಕೀಯ ಆರೈಕೆ, ಮರಣ, ಇತ್ಯಾದಿ ಅಗತ್ಯಗಳನ್ನು ಉದ್ದೇಶಿಸಲು, ರಸ್ತೆ ಹಾಗೂ ಪ್ರಾಯಶಃ ರೈಲಿನ ಮೂಲಕ, ಸೂಕ್ತ ಅನುಮತಿ ಹಾಗೂ ಆಶ್ರಯ, ಆಹಾರ, ಆರೋಗ್ಯ ತಪಾಸಣೆ, ಔಷಧೋಪಚಾರ ಅಥವಾ ಕ್ವಾರಂಟೈನ್ ಮಾಡುವುದು.
7. **ಸ್ಥಿರ ವಿದ್ಯುತ್ ಸರಬರಾಜಿನ ನಿರ್ವಹಣೆ:** ಲಾಕ್‌ಡೌನ್ ಸಮಯದಲ್ಲಿ ಹಾಗೂ ಲಾಕ್‌ಡೌನ್ ನಂತರದ ಯಥಾಸ್ಥಿತಿಗೆ ವೇಗವಾಗಿ ತರಲು, ತಡೆರಹಿತ ವಸತಿ ಮತ್ತು ಕೃಷಿ ವಿದ್ಯುತ್ ಸರಬರಾಜನ್ನು ಖಚಿತಪಡಿಸಿಕೊಳ್ಳಲು, ವಿತರಣಾ ಮೂಲಸೂಕರ್ಯದ ಕಡೆಗೆ ಗಮನ ಹರಿಸುವುದು.
8. **ಸ್ಥಿರ ಇಂಧನ ಪೂರೈಕೆಯ ನಿರ್ವಹಣೆ:** ಸರಕು ಸಾಗಣೆ, ತುರ್ತು ವಾಹನ ಸೇವೆಗಳ ನಿರ್ವಹಣೆಗಾಗಿ (ಡೀಸಲ್, ಪೆಟ್ರೋಲ್, ಎಲ್‌ಪಿಜಿ ಅಥವಾ ಸಿಎನ್‌ಜಿಯ) ಸೂಕ್ತ ದಾಸ್ತಾನುಗಳು; ಅತ್ಯವಶ್ಯಕ ಮೂಲಸೌಕರ್ಯಗಳು (ಉದಾ: ಮೊಬೈಲ್ ಟವರ್ ಗಳು, ಟೆಲಿಕಾಂ ವ್ಯವಸ್ಥೆಗಳು ಹಾಗೂ ದತ್ತಾಂಶ ಕೇಂದ್ರಗಳು, ಆಸ್ಪತ್ರೆಗಳು); ಅತ್ಯವಶ್ಯಕ ಉತ್ಪಾದನಾ ಸೌಲಭ್ಯಗಳು, ಗೋದಾಮುಗಳು ಹಾಗೂ ಕೋಲ್ಡ್ ಚೈನ್‌ಗಳು, ಕೃಷಿ ಹಾಗೂ ತತ್ಸಂಬಂಧಿತ ಚಟುವಟಿಕೆಗಳಿಗೆ ಪೂರಕ ಅಥವಾ ಪ್ರಸ್ತುತ ಸಾಮರ್ಥ್ಯವಿರುವ ವಿದ್ಯುತ್ ಸರಬರಾಜು, ಹಾಗೂ ಲಾಕ್‌ಡೌನ್ ನಂತರದ ಸಾರ್ವಜನಿಕ ಮತ್ತು ಖಾಸಗಿ ಪ್ರಯಾಣಿಕರ ಬೇಡಿಕೆಗಳಿಗಾಗಿ ಸಿದ್ಧತೆ ವಹಿಸುವುದು.
9. **ಸರಕು ಸಾಗಣೆ ನಿರ್ವಹಣೆ ಹಾಗೂ ವಿಸ್ತರಣೆ:** ರೈಲು, ರಸ್ತೆ ಹಾಗೂ ವಾಯುಯಾನದ ಮೂಲಕ ಆಹಾರ ಮತ್ತು ಅಗತ್ಯ ವಸ್ತುಗಳ ಅಂತರರಾಜ್ಯ ಹಾಗೂ ರಾಜ್ಯದ ಆಂತರಿಕ ಚಲನೆ, ನಿರಂತರ ಪ್ರಕ್ರಿಯೆ ಹಾಗೂ ಕಾರ್ಯತಾಂತ್ರಿಕ ಉತ್ಪಾದನಾ ಘಟಕಗಳು, ಹಾಗೂ ಲಾಕ್‌ಡೌನ್ ನಂತರದ

ಶೀಘ್ರ ಮರುಸ್ಥಾಪನೆಯ ಕಾರ್ಯಾಚರಣೆಗಳಿಗೆ ನೆರವು ನೀಡಲು ಸ್ಥಳೀಯ ಸಡಲಿಕೆಗಳು ಅಗತ್ಯವಾಗಬಹುದು.

10. **ಗೋದಾಮುಗಳು ಹಾಗೂ ಕೋಲ್ಡ್ ಚೈನ್ ಸೇವೆಗಳ ನಿರ್ವಹಣೆ:** ಸಮರ್ಪಕ ಮಟ್ಟದ ಅಗತ್ಯ ವಸ್ತುಗಳು ದಾಸ್ತಾನು ಹಾಗೂ ಕಾರ್ಯಚಟುವಟಿಕೆ, ಸಾರ್ವಜನಿಕ, ಖಾಸಗಿ, ಮತ್ತು ಅನೌಪಚಾರಿಕ ವಲಯದ ಕಾರ್ಮಿಕರ ರಕ್ಷಣೆ, ಸೌಲಭ್ಯಗಳ ಸಂರಕ್ಷಣೆ ಹಾಗೂ ಸಮರ್ಪಕ ವಿದ್ಯುತ್, ನೀರು ಸರಬರಾಜು, ಮರಳು, ತ್ಯಾಜ್ಯ ನಿರ್ವಹಣಾ ಸೇವೆಗಳನ್ನು ಖಚಿತಪಡಿಸಿಕೊಳ್ಳುವ ಮೂಲಕ, ಪಿಡಿಎಸ್ ಹಾಗೂ ಅಗತ್ಯ ಸೇವಾ ವ್ಯವಸ್ಥೆಗಳಿಗೆ ನೆರವು ಒದಗಿಸುವುದು.
11. **ಅಗತ್ಯ ಸೇವೆಗಳ ಪೂರೈಕೆಯ ಸರಪಳಿಗಳ ನಿರ್ವಹಣೆ:** ವಿತರಣಾ ಹಾಗೂ ಚಿಲ್ಲರೆ ವ್ಯಾಪಾರ ಸರಪಳಿಗಳಲ್ಲಿ ಅಂತರ್ಗತವಾದ ಅತ್ಯವಶ್ಯಕ ಸೇವೆಗಳು ಹಾಗೂ ಅನೌಪಚಾರಿಕ ವಲಯದ ವ್ಯವಸ್ಥೆಗಳಲ್ಲಿನ ತೊಡಕುಗಳನ್ನು ಉದ್ದೇಶಿಸಿ, ಪ್ರಮುಖ ಪಾಲುದಾರರೊಂದಿಗೆ ಸಂವಾದವನ್ನು ಪ್ರಾರಂಭಿಸುವುದು ಹಾಗೂ ಲಾಕ್‌ಡೌನ್ ಪರಿಸ್ಥಿತಿಗಳ ಹಂತಹಂತದ ಸಡಲಿಕೆಯನ್ನು ಸಾಧ್ಯಗೊಳಿಸುವುದು.
12. **ಸ್ಥಿರವಾದ ನೀರು ಸರಬರಾಜು ಸೇವೆಗಳ ನಿರ್ವಹಣೆ:** ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿನ ದಟ್ಟಣೆಯ ಪರಿಸ್ಥಿತಿಗಳಲ್ಲಿ ದೊಡ್ಡ ಜನಸಂಖ್ಯೆಯು ಲಾಕ್‌ಡೌನ್ ಆಗಿರುವುದರಿಂದ, ನೀರಿನ ಮೂಲಕ ಹರಡುವ ರೋಗಗಳ ಅಪಾಯವನ್ನು ಸೀಮಿತಗೊಳಿಸುವುದು. ನೀರಿನ ಕೊರತೆಯಿರುವ ಪ್ರದೇಶಗಳಿಗೆ ನಿಯಮಿತವಾದ ಪೈಪ್‌ಲೈನ್-ಆಧಾರಿತ ಅಥವಾ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವುದು. ಅಂತರ್ಜಲದ ಮೇಲೆ ಅವಲಂಬಿತವಾಗಿರುವ ಸ್ಥಳಗಳಲ್ಲಿ ಸುಸ್ಥಿರ ವಿದ್ಯುತ್ ಪೂರೈಕೆ.
13. **ಸುಸ್ಥಿರ ನೈರ್ಮಲ್ಯ ಹಾಗೂ ಘನತ್ಯಾಜ್ಯ ಸೇವೆಗಳ ನಿರ್ವಹಣೆ:** ವಿಶೇಷವಾಗಿ ಬಹುತೇಕ ಸಂಖ್ಯೆಗಳ ಜನರು ಲಾಕ್‌ಡೌನ್‌ನಲ್ಲಿರುವ ಕಾರಣ, ನೈರ್ಮಲ್ಯ ಪರಿಸ್ಥಿತಿಗಳ ನಿರ್ವಹಣೆ. ಕೋವಿಡ್-19ಗೆ ಒಡ್ಡಿಕೊಂಡ ಮುಂಚೂಣಿಯಲ್ಲಿ ಕೆಲಸ ಮಾಡುತ್ತಿರುವ ನೈರ್ಮಲ್ಯ ಹಾಗೂ ಘನತ್ಯಾಜ್ಯ ಕಾರ್ಮಿಕರ ರಕ್ಷಣೆಗೆ ಹೆಚ್ಚು ಗಮನ ನೀಡುವುದು.
14. **ಕೃಷಿ ಹಾಗೂ ಕೃಷಿಯೇತರ ಚಟುವಟಿಕೆಗಳಿಗೆ ಬೆಂಬಲ:** ಸಮರ್ಪಕ ತಪಾಸಣೆ ಹಾಗೂ ರಕ್ಷಣೆಯೊಂದಿಗೆ ಕೃಷಿ ಕಾರ್ಮಿಕರ ಚಲನವಲನದ ಮೇಲೆ ಸಡಲಿಕೆಯೂ ಸೇರಿದಂತೆ, ಕೃಷಿ ಸಲಕರಣೆಗಳು ಹಾಗೂ ಕೃಷಿ ಸಾಮಗ್ರಿಗಳ ಸಾಗಣೆ ಮತ್ತು ಜೂನ್ 2020ರಲ್ಲಿ ಪ್ರಾರಂಭವಾಗುವ ಅಪೇಕ್ಷಿತ ಕೃಷಿ ಚಟುವಟಿಕೆಗಳಿಗೆ ನೆರವು ನೀಡುವುದು.
15. **ನೀರಾವರಿ ಸೇವೆಗಳ ನಿರ್ವಹಣೆ:** ಲಾಕ್‌ಡೌನ್ ನಂತರ ಸೇವೆಗಳ ಶೀಘ್ರ ಮರುಸ್ಥಾಪನೆಗಾಗಿ ಹಾಗೂ ಮುಂಗಾರಿನ ಬೆಳೆಗಳ ಬಿತ್ತನೆಯ ರಕ್ಷಣೆ, ಜೊತೆಗೆ ತರಕಾರಿ ಮತ್ತು ಹಣ್ಣುಗಳ ಸರಬರಾಜನ್ನು ಸ್ಥಿರಗೊಳಿಸುವುದು.
16. **ಅಗತ್ಯ ವಸ್ತುಗಳ ಉತ್ಪಾದನೆಯಲ್ಲಿ ಹೆಚ್ಚಳ:** ಉದಾ., ಔಷಧಗಳು, ವೈದ್ಯಕೀಯ-ಸಂಬಂಧಿತ ವಸ್ತುಗಳು, ಆಹಾರ, ಬೇಯಿಸಿದ ಆಹಾರ, ಮನೆಗೆ ಬೇಕಾದ ವಸ್ತುಗಳು, ರಾಜ್ಯದಲ್ಲಿ ಇಂಧನದ ಸಂಸ್ಕರಣೆ, ಅಥವಾ ಬದಲಿ ಅಂತರ-ರಾಜ್ಯ ವ್ಯವಸ್ಥೆಗಳು.
17. **ಕಾರ್ಮಿಕರ ಹಾಗೂ ಅವರ ಜೀವನೋಪಾಯಗಳ ರಕ್ಷಣೆ:** ಅದರಲ್ಲೂ ವಿಶೇಷವಾಗಿ ವಲಸಿಗರು ಹಾಗೂ ಅನೌಪಚಾರಿಕ ವಲಯದಲ್ಲಿ ಕೆಲಸ ಮಾಡುತ್ತಿರುವವರು. ಮುಂಚೂಣಿಯಲ್ಲಿರುವ ಆರೋಗ್ಯ ಹಾಗೂ ನೈರ್ಮಲ್ಯ ಕಾರ್ಯಕರ್ತರಿಗೆ ವೈಯಕ್ತಿಕ ರಕ್ಷಣಾ ಸಾಧನ (ಪಿಪಿಎ)ಗಳ ದಾಸ್ತಾನು ಶೇಖರಣೆ ಹಾಗೂ ವಿತರಣೆ. ಕಾನೂನು ಮತ್ತು ಸುವ್ಯವಸ್ಥೆ, ಆಡಳಿತ, ಜೀವನಾಡಿಯಾದ ಮೂಲಸೌಕರ್ಯಗಳು ಹಾಗೂ ಅಗತ್ಯ ಸರಬರಾಜಿನ ಕಾರ್ಯಗಳಲ್ಲಿ ಮುಂಚೂಣಿಯಲ್ಲಿ ತೊಡಗಿರುವವರಿಗೆ ಸೂಕ್ತ ರಕ್ಷಣಾ ಹಾಗೂ ತರಬೇತಿ ಕ್ರಮಗಳು.
18. **ವಲಸೆ ಕಾರ್ಮಿಕರು ಹಾಗೂ ವಲಸಿಗ ಕುಟುಂಬಗಳ ಅಗತ್ಯಗಳನ್ನು ಉದ್ದೇಶಿಸುವುದು.**
19. **ದುರ್ಬಲ ಗುಂಪುಗಳ ಅಗತ್ಯಗಳನ್ನು ಉದ್ದೇಶಿಸುವುದು:** ಉದಾ., ನಿರ್ಗತಿಕರು, ವೃದ್ಧರು, ಕೈದಿಗಳು, ಮಾನಸಿಕ ಅಸ್ವಸ್ಥರು ಹಾಗೂ ದೈಹಿಕ ನ್ಯೂನತೆ ಇರುವ ವ್ಯಕ್ತಿಗಳು
20. **ಬೆಳಕಿಗೆ ಬರುತ್ತಿರುವ ಹಸಿವು ಹಾಗೂ ಅಪೌಷ್ಟಿಕತೆಯ ಬಿಕ್ಕಟ್ಟನ್ನು ಪರಿಹರಿಸುವುದು:** ಹಾಗೂ ಅದರಿಂದ ವಿಶೇಷವಾಗಿ ಬಡವರು, ದುರ್ಬಲರು, ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳು ಹಾಗೂ ಮಹಿಳೆಯರಲ್ಲಿನ ಮರಣ ಪ್ರಮಾಣ ಹಾಗೂ ರೋಗಹರಡುವಿಕೆಯ ಮೇಲೆ ಬೀರುವ ಪ್ರಭಾವ

**ಉದ್ದೇಶಿಸಬೇಕಾದ ಹನ್ನೆರಡು ಪ್ರಮುಖ ಪ್ರಶ್ನೆಗಳು**

1. **ಸರಕು/ಸೇವೆಗಳಿಗೆ ನಿರೀಕ್ಷಿತ ಅವಶ್ಯಕತೆ/ಬೇಡಿಕೆ ಎಲ್ಲಿಂದ ಬರಬಹುದು?** ಎಷ್ಟು ವೇಗವಾಗಿ ಇದರ ಮರುಪೂರಣದ ಅಗತ್ಯವಿದೆ? ಇದಕ್ಕೆ ಹೊಣೆಗಾರಿಕೆ ಹೊಂದಿದ ನೋಡಲ್ ಸಂಸ್ಥೆ/ವ್ಯಕ್ತಿ ಯಾರು?
2. **ಪ್ರಮುಖ ದಾಸ್ತಾನುಗಳ ಸರಬರಾಜಿನ ಸ್ಥಳ ಎಲ್ಲಿದೆ?** ಅದನ್ನು ಮರುಪೂರಣಗೊಳಿಸುವುದು ಹೇಗೆ? ಅದರ ನಿಯಂತ್ರಣ ಮಾಡುವವರು ಯಾರು? ಅವುಗಳನ್ನು ಹೇಗೆ ಪಡೆದುಕೊಳ್ಳಬಹುದು? ಬೃಹತ್ ದಾಸ್ತಾನುಗಳನ್ನು ಹೇಗೆ ಸುರಕ್ಷಿತಗೊಳಿಸಬಹುದು?
3. **ಪ್ರಮುಖ ಸಾರಿಗೆ ಹಾಗೂ ಸಾಗಾಣಿಕೆ ವ್ಯವಸ್ಥೆಗಳು/ವಾಹನಗಳು ಎಲ್ಲಿವೆ?** ಚಲನವಲನ, ಸಾಗಣೆ, ವಿತರಣೆಯ ನಿರ್ವಹಣೆಯನ್ನು ಮಾಡಲು

iihs
INDIAN INSTITUTE FOR HUMAN SETTLEMENTS

ಸಾಕಷ್ಟು ಇಂಧನ ಹಾಗೂ ಸಿಬ್ಬಂದಿ ಅವರಲ್ಲಿ ಇದೆಯೇ? ಅವುಗಳನ್ನು ಹೊಂದಿಸುವ ಹೊಣೆಗಾರಿಕೆ ಹಾಗೂ ಅಧಿಕಾರವನ್ನು ಯಾರಿಗೆ ನೀಡಬೇಕು? ಅವುಗಳ ಸೇವೆ ಹಾಗೂ ನಿರ್ವಹಣೆಯನ್ನು ಹೇಗೆ ಮಾಡಬಹುದು?

**4.** **ಜೀವಜಾಲವಾದ (lifeline) ಮೂಲ ಸೌಕರ್ಯ ಹಾಗೂ ಸೇವೆಗಳ ಕಾರ್ಯಾಚರಣೆ ಹಾಗೂ ನಿರ್ವಹಣೆಗೆ ಅಗತ್ಯವಾದ ಅತ್ಯವಶ್ಯಕ ಸಿಬ್ಬಂದಿ ಯಾರು?** ಅವರನ್ನು ಹಾಗೂ ಅವರ ಕುಟುಂಬದವನ್ನು ಸುರಕ್ಷಿತವಾಗಿಡುವುದು ಹೇಗೆ? ಅವರನ್ನು ತಮ್ಮ ಕೆಲಸದ ಸ್ಥಳಗಳಿಗೆ ಸುರಕ್ಷಿತವಾಗಿ ತಲುಪಿಸುವುದು ಹೇಗೆ?

5. **ಸರಬರಾಜು, ಸಿಬ್ಬಂದಿ ಹಾಗೂ ಸಾರಿಗೆಗೆ ಹಣಪಾವತಿ ಮಾಡಲು ಅಗತ್ಯವಿರುವ ಆರ್ಥಿಕ ಸಂಪನ್ಮೂಲಗಳು ಎಲ್ಲಿವೆ?** ಅದನ್ನು ಬಿಡುಗಡೆ ಮಾಡುವವರು ಯಾರು? ಎಷ್ಟು ಶೀಘ್ರಗತಿಯಲ್ಲಿ ಮಾಡುತ್ತಾರೆ? ಅದನ್ನು ಯಾರ ಅಧಿಕಾರದ ಅಡಿಯಲ್ಲಿ ಮಾಡುತ್ತಾರೆ?

6. **ಅಗತ್ಯ ವಸ್ತುಗಳ ಬೆಲೆಗಳನ್ನು ನಿಯಂತ್ರಿಸಲು ಹಾಗೂ ಜಾರಿಗೊಳಿಸಲು ವ್ಯವಸ್ಥೆಗಳು ಜಾರಿಯಲ್ಲಿವೆಯೇ** ಹಾಗೂ ಈ ಬೆಲೆಗಳನ್ನು ನಿಗದಿ ಪಡಿಸಿದ ಬಗೆಗಿನ ವ್ಯಾಪಕ ಮಾಹಿತಿ ಲಭ್ಯವಿದೆಯೇ?

7. **ಆಹಾರ, ನಾಗರಿಕ ಸರಬರಾಜು ಹಾಗೂ ಅಗತ್ಯ ವಸ್ತುಗಳ ಉತ್ಪಾದನೆಯು ಮುಂದುವರೆಯುತ್ತಿದೆಯೇ?** ಇಲ್ಲವಾದಲ್ಲಿ, ಈ ಘಟಕಗಳನ್ನು ಮತ್ತೆ ಪ್ರಾರಂಭಿಸಿ, ಸದೃಢಪಡಿಸುವುದು ಹೇಗೆ, ಅಥವಾ ಗಡಿಗಳ ನಡುವಿನ ಸರಬರಾಜು ವ್ಯವಸ್ಥೆಗಳನ್ನು ಮಾಡುವುದು ಹೇಗೆ?

**8.** **ಈ ಕಾರ್ಯವನ್ನು ಆಚರಣೆಗೆ ತರಲು ಅಗತ್ಯವಾದ ನಿಯಮಿತ/ತುರ್ತು ನಿಯಮಗಳು ಅಥವಾ ಆಡಳಿತಾತ್ಮಕ ಆದೇಶಗಳು ಯಾವುವು?** ಅವುಗಳನ್ನು ನೀಡುವ ಹೊಣೆಗಾರಿಕೆ ಯಾರ ಮೇಲಿರುತ್ತದೆ? ಅದರ ಮೇಲ್ವಿಚಾರಣೆಗೆ ಯಾರು ಹೊಣೆ?

**9.** **ಈ ಎಲ್ಲ ಪ್ರಶ್ನೆಗಳನ್ನು ಕುರಿತಾದ ಮಾಹಿತಿಯು ಪ್ರತಿಯೊಂದು ಜಿಲ್ಲೆಯ ಕಂಟ್ರೋಲ್ ರೂಮ್‌ಗೆ/ನಿಯಂತ್ರಣ ಕೊಠಡಿಗೆ ಹರಿದು ಬರುತ್ತಿದೆಯೇ ಹಾಗೂ ಅದನ್ನು ಪ್ರತಿದಿನ ಡಿಜಿಟಲ್ ರೂಪದಲ್ಲಿ/ನಕ್ಷೆಯ ರೂಪದಲ್ಲಿ ಪರಿವರ್ತಿಸಲಾಗಿದೆಯೇ?** ಪ್ರತಿದಿನವೂ ತೊಡಕು ತಂದಿಡುವ ಅಂಶಗಳು, ಸಂಸ್ಥೆಗಳು ಹಾಗೂ ಸಂಪರ್ಕಜಾಲಗಳನ್ನು ಗುರುತಿಸಲಾಗುತ್ತಿದೆಯೇ? ಇವುಗಳನ್ನು ನಿವಾರಣೆ ಮಾಡಲಾಗುತ್ತಿದೆಯೇ? ಇದರ ಮೇಲ್ವಿಚಾರಣೆ ಯಾರ ಹೊಣೆ?

**10.** **ಸಂಪನ್ಮೂಲ ಹರಿವಿನ ಕೊರತೆಯನ್ನು ಉದ್ದೇಶಿಸಲು ತುರ್ತು ಯೋಜನೆಗಳು ಇವೆಯೇ?** ಇದು ಬಡ ಹಾಗೂ ದುರ್ಬಲ ವರ್ಗದವರನ್ನು, ಹಾಗೂ ದುರ್ಗಮ ಪ್ರದೇಶ/ಸ್ಥಳಗಳಿಗೆ ಆದ್ಯತೆ ನೀಡುತ್ತದೆಯೇ? ಮೇಲ್ವಿಚಾರಣೆಗೆ ಯಾರು ಹೊಣೆ?

**11.** **ತುರ್ತು ಸಂವಹನಾ ಯೋಜನೆಯು ಜಾರಿಯಲ್ಲಿದೆಯೇ ಹಾಗೂ ತುರ್ತು ಸಂವಹನದ ಮಾರ್ಗಗಳು/ವಿಧಾನಗಳು ಜಾರಿಯಲ್ಲಿವೆಯೇ:** ನಾಗರಿಕರು, ಪಾಲುದಾರರು, ಸ್ಥಳೀಯ ಕಾರ್ಯಕರ್ತರಿಂದ ಹಿಡಿದು, ಜಿಲ್ಲಾ ಹಾಗೂ ರಾಜ್ಯ ಪರಿಸ್ಥಿತಿ ಕೊಠಡಿಗಳವರೆಗೂ **ಜಾರಿಯಲ್ಲಿವೆಯೇ?**

12. ನಾಗರಿಕ ಆಡಳಿತಕ್ಕೆ ಅವಶ್ಯಕವೆನಿಸಿದಲ್ಲಿ, ಸೇನೆ ಹಾಗೂ ಅರೆಸೈನಿಕ ಪಡೆಗಳ ನೆರವಿನೊಂದಿಗೆ, **ಕಾನೂನು ಹಾಗೂ ಸುವ್ಯವಸ್ಥೆಯನ್ನು ಕಾಪಾಡಲು ಹಾಗೂ ಅಗತ್ಯ ಸೇವೆಗಳು ಮತ್ತು ಸಾಮಗ್ರಿಗಳ ನಿರ್ವಹಣೆಗಾಗಿ ತುರ್ತು ಯೋಜನೆಗಳು ಜಾರಿಯಲ್ಲಿವೆಯೇ?**